2.	ಬಂಟ್ವಾಳ ತಾಲ್ಲೂಕು	ಇಲ್ಲ.
3.	ಪುತ್ತೂರು ತಾಲ್ಲೂಕು	ಇಲ್ಲ.
4.	ಬೆಳ್ತಂಗಡಿ ತಾಲ್ಲೂಕು	ಇಲ್ಲ.
5.	ಸುಳ್ಯ ತಾಲ್ಲೂಕು	ಇಲ್ಲ.
	ಒಟ್ಟು	**13**

ಇ) ಕರ್ನಾಟಕ ರಾಜ್ಯದಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಗೆ ಅನುಗುಣವಾಗುವಂತೆ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವನ್ನು ಸ್ಥಾಪಿಸಲು ಸರ್ಕಾರಿ ಪತ್ರ. ಸಂ. ಸಿಎಂಡಬ್ಲ್ಯೂ :74 :ಸಿಆರ್‌ಸಿ : 96, ದಿನಾಂಕ: 20.3.97ರಲ್ಲಿ ಅನುಮತಿ ನೀಡಿದೆ.

ಹಾಸನ ಜಿಲ್ಲೆಯಲ್ಲಿ ಖಾಯಂ ಸಾಗುವಳಿ ಪತ್ರ ವಿತರಣೆ

3019 - ಶ್ರೀ ಎ.ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಹಾಸನ ಜಿಲ್ಲೆಯಲ್ಲಿ ವಿವಿಧ ಕಾರ್ಯಕ್ರಮದಡಿಯಲ್ಲಿ ಸುಮಾರು 20-30 ವರ್ಷದ ಹಿಂದೆ ಹಂಗಾಮಿ ಸಾಗುವಳಿ ಪತ್ರ ವಿತರಿಸಿದ್ದು, ಸಾಗುವಳಿದಾರರಿಗೆ ಇಂದಿನವರೆವಿಗೂ ಖಾಯಂ ಸಾಗುವಳಿ ಪತ್ರ ನೀಡದೆ ಶಾಶ್ವತ ಭೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡಲು ಸಂಬಂಧಿಸಿದ ರೈತರಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ?*

ಆ) *ಸರ್ಕಾರ ಖಾಯಂ ಸಾಗುವಳಿ ಪತ್ರ ನೀಡಲು ಕ್ರಮ ತೆಗೆದುಕೊಳ್ಳುವುದೆ?*

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :

ಅ) ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಪರಿಶೀಲಿಸಲಾಗುತ್ತಿದೆ.

ಆಲಮಟ್ಟಿ ಸಂತ್ರಸ್ತರಿಗೆ ಉದ್ಯೋಗ

3020 - ಶ್ರೀ ರಾಜಶೇಖರ ವಿ. ಶೀಲವಂತ (ಗುಳ್ಳೇದಗುಡ್ಡ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕೃಷ್ಣ ಮೇಲ್ದಂಡೆ ಯೋಜನೆಯಡಿ ಮುಳುಗಡೆ ಹೊಂದಿದ ಊರುಗಳ ಪುನರ್ವಸತಿ ಕೇಂದ್ರಗಳ ಹತ್ತಿರ ಸಣ್ಣ ಕೈಗಾರಿಕೆ ಪ್ರಾರಂಭಿಸಿ ನಿರ್ಗತಿಕ ಜನರಿಗೆ ಉದ್ಯೋಗ ಒದಗಿಸುವ ಯೋಜನೆಯು ಸರ್ಕಾರದ ಮುಂದಿದೆಯೇ?*

ಆ) *ಹಾಗಿದ್ದಲ್ಲಿ ಕೈಗಾರಿಕೆ ಶುರು ಮಾಡಲಾಗಿದೆಯೇ? (ಅವು ಎಲ್ಲೆಲ್ಲಿವೆ).*

ಇ) *ಇರದಿದ್ದರೆ ಆ ಜನರ ಬದುಕಿಗೆ ಬೇರೆ ದಾರಿ ಏನು?*